ತಿಳಿದುಕೊಂಡಂತೆ ಗ್ರಾಮೀಣ ಪ್ರದೇಶದ ಭೂ ಪರಿವರ್ತನಾ ಶುಲ್ಕ ಈ ಹಿಂದೆ ಒಂದು ಎಕರೆಗೆ 1315 ರೂಪಾಯಿ ಇತ್ತು. ಅದನ್ನು ಏಕಾ ಏಕಿ 8700 ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದ್ದಾರೆ. ಹಾಗೆಯೇ ನಗರ ಪರಿಮಿತಿಯೊಳಗೆ ಒಂದು ಎಕರೆಗೆ 3200 ಭೂ ಪರಿವರ್ತನಾ ಶುಲ್ಕ ಇದ್ದದ್ದನ್ನು ಆರೂವರೆ ಸಾವಿರ ರೂಪಾಯಿಗಳವರೆಗೆ ಹೆಚ್ಚು ಮಾಡಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಗ್ರಾಮೀಣ ಪ್ರದೇಶದಲ್ಲಿ ಒಂದು ಎಕರೆ ಭೂಮಿಯ ಬೆಲೆ 10 ಸಾವಿರ ರೂಪಾಯಿ ಇದ್ದರೆ ಅದಕ್ಕೆ ಸರಿ ಸಮನಾಗಿ ಭೂ ಪರಿವರ್ತನಾ ಶುಲ್ಕವನ್ನು ಕೊಡುವಂಥ ಪರಿಸ್ಥಿತಿ ಉದ್ಭವವಾಗಿದೆ. ಭೂ ಪರಿವರ್ತನಾ ಶುಲ್ಕವನ್ನು 1375 ರೂಪಾಯಿಗಳಿಂದ ಏಕಾ ಏಕಿ 8700 ರೂಪಾಯಿಗಳಿಗೆ ಏರಿಸುವುದಕ್ಕೆ ಮಾನದಂಡ ಏನು? ಸ್ಥಳೀಯವಾಗಿ ಒಂದು ಎಕರೆಗೆ 10 ಸಾವಿರ ರೂಪಾಯಿ ಬೆಲೆ ಇದ್ದರೆ ಅಷ್ಟೇ ಮೊತ್ತವನ್ನು ಭೂ ಪರಿವರ್ತನಾ ಶುಲ್ಕವಾಗಿ ಕೊಡಬೇಕಾಗಿ ಬಂದಿರುವುದರಿಂದ ಗ್ರಾಮಾಂತರ ಪ್ರದೇಶಗಳ ಜನರು ಬಹಳ ಸಂಕಟಕ್ಕೀಡಾಗಿದ್ದಾರೆ. ಈ ಪರಿವರ್ತನಾ ದರವನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನಿಸಲಾಗುತ್ತಿದೆಯೇ ಎಂದು ನಾನು ಕೇಳುತ್ತಿದ್ದೇನೆ.

+ಶ್ರೀ ರಮೇಶ್ ಸಿ.ಜಿಗಜಿಣಗಿ:- ಮಾನ್ಯ ಅಧ್ಯಕ್ಷರೆ, ರೂರಲ್ ಪ್ರದೇಶಗಳಲ್ಲಿ ನಿಗದಿ ಮಾಡಿರುವ ಲ್ಯಾಂಡ್ ಕನ್‌ವರ್ಷನ್ ಫೀ ಜಾಸ್ತಿಯಾಗಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಇದು ಹೆಚ್ಚಿನ ಶುಲ್ಕವಲ್ಲ. ಏಕೆಂದರೆ, ಇದುವರೆಗೂ ಯಾವುದೇ ಸಮಾಜ ಸಂಘಟನೆಗಳವರಾಗಲೀ ಅಥವಾ ಯಾವುದೇ ಊರಿನವರಾಗಲೀ ಇದರ ಬಗ್ಗೆ ವಿರೋಧ ವ್ಯಕ್ತ ಮಾಡಿ ಪತ್ರವನ್ನು ಸರ್ಕಾರಕ್ಕೆ ಬರೆದಿಲ್ಲ. ಮತ್ತು ಈ ಹೆಚ್ಚಳವನ್ನು ಯಾವುದೇ ದುರುದ್ದೇಶಕ್ಕೆ ಮಾಡಿದ್ದಲ್ಲ. ಇವತ್ತಿನ ದಿವಸ ಬೆಂಗಳೂರು ನಗರದ ಸುತ್ತ ಮುತ್ತಲ ಪ್ರದೇಶಗಳಲ್ಲಿ ಒಂದು ಎಕರೆ ಜಮೀನಿಗೆ 10 ಲಕ್ಷ ರೂಪಾಯಿಗಳಿಂದ 20 ಲಕ್ಷ ರೂಪಾಯಿಗಳವರೆಗೆ ಬೆಲೆ ಇದೆ. ಭೂಮಿಯ ಬೆಲೆ ಹೆಚ್ಚಾಗಿರುವುದರಿಂದ ಸರ್ಕಾರಕ್ಕೂ ಸ್ವಲ್ಪ ಹೆಚ್ಚಿನ ಆದಾಯ ಬರಲಿ ಎನ್ನುವ ಉದ್ದೇಶದಿಂದ ಈ ಲ್ಯಾಂಡ್ ಕನ್‌ವರ್ಷನ್ ಫೀಸನ್ನು ಜಾಸ್ತಿ ಮಾಡಲಾಗಿದೆ. ರೂರಲ್ ಏರಿಯಾದಲ್ಲಿ ಲ್ಯಾಂಡ್ ಕನ್‌ವರ್ಷನ್ ಫೀಸ್ ಜಾಸ್ತಿ ಮಾಡಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆಯೆಂದು ಮಾನ್ಯ ಸದಸ್ಯರು ಹೇಳಿರುವುದರಿಂದ ಮಂಗಳೂರು ಜಿಲ್ಲೆಯ ಸಂಬಂಧಪಟ್ಟ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಮರುಪರಿಶೀಲನೆ ಮಾಡುತ್ತೇನೆ.

ವಿಷಯ:- ಗುಬ್ಬಿ ತಾಲ್ಲೂಕಿಗೆ ಹೆಚ್ಚಿನ ಸಾರಿಗೆ ವ್ಯವಸ್ಥೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 83 (634)

ಶ್ರೀ ಜಿ.ಎಸ್.ಶಿವನಂಜಪ್ಪ (ಗುಬ್ಬಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲಕಿನಲ್ಲಿ ತುರುವೇಕೆರೆ ಡಿಪೋ ಆಗುವುದಕ್ಕಿಂತ

ಮುಂಚೆ ಸಂಚರಿಸುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು?

ಆ) ತುಮಕೂರು-ಗುಬ್ಬಿ, ಸಿ.ಎನ್.ಪುರ, ಕಲ್ಲೂರು ಮಾರ್ಗ ತುರುವೇಕೆರೆಗೆ ಹೋಗುತ್ತಿದ್ದ ಸಾರಿಗೆ ಬಸ್ಸು ನಿಲ್ಲಿಸಲು ಕಾರಣವೇನು? ಇದರಿಂದ ಇಲ್ಲಿನ ಗ್ರಾಮೀಣ ಜನರಿಗೆ ತೊಂದರೆ ಆಗಿರುವುದನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ತುರುವೇಕೆರೆ ಘಟಕ ಪ್ರಾರಂಭವಾಗುವ ಮುನ್ನ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ 86 ಬಸ್ಸುಗಳು ಆಚರಣೆಯಲ್ಲಿದ್ದವು.

ಆ) ತುಮಕೂರಿನಿಂದ ತುರುವೇಕೆರೆಗೆ ಅನುಸೂಚಿಗಳ ಬದಲಾವಣೆ ಸಮಯದಲ್ಲಿ ಈ ಸಾರಿಗೆಯು ಕೆಲವು ದಿನಗಳು ಆಚರಣೆಯಾಗಲಿಲ್ಲ. ಪ್ರಸ್ತುತ ಈ ಸಾರಿಗೆಯು ತುರುವೇಕೆರೆ ಘಟಕದ ಅನುಸೂಚಿ ಸಂಖ್ಯೆ:6 ಎ-ಬಿಯಲ್ಲಿ ಆಚರಣೆಯಾಗುತ್ತಿದೆ. ದಿನಾಂಕ 2-9-95ರಂದು ತುರುವೇಕೆರೆಯಲ್ಲಿ ಒಂದು ಘಟಕವನ್ನು ಪ್ರಾರಂಭಿಸಿ ಇಲ್ಲಿನ ಗ್ರಾಮಾಂತರ ಜನರಿಗೆ ಮತ್ತಷ್ಟು ಸಾರಿಗೆ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಶ್ರೀ ಜಿ.ಎಸ್.ಶಿವನಂಜಪ್ಪ:- ಮಾನ್ಯ ಅಧ್ಯಕ್ಷರೆ, ತುರುವೇಕೆರೆಯಲ್ಲಿ ಹೊಸದಾಗಿ ಒಂದು ಬಸ್ ಡಿಪೋ ಆಯಿತು. ಇಲ್ಲಿ ಡಿಪೋ ಆಗುವುದಕ್ಕಿಂತ ಮೊದಲು ಗುಬ್ಬಿ ತಾಲ್ಲೂಕಿನ ಬಸ್ ಡಿಪೋದಲ್ಲಿ 86 ಬಸ್‌ಗಳಿದ್ದವು. ಈಗ ಎಷ್ಟು ಬಸ್‌ಗಳು ಗುಬ್ಬಿ ತಾಲ್ಲೂಕಿನ ಡಿಪೋದಲ್ಲಿ ಇವೆಯೆಂಬುದನ್ನು ಮಾನ್ಯ ಸಚಿವರು ತಿಳಿಸುತ್ತಾರೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ತುರುವೇಕೆರೆ ಡಿಪೋದಿಂದ 39 ಶೆಡ್ಯೂಲ್ಸ್ ಮತ್ತು 43 ಬಸ್‌ಗಳು ಓಡಾಡುತ್ತಿವೆ.

+ಶ್ರೀ ಜಿ.ಎಸ್.ಶಿವನಂಜಪ್ಪ:- ಎರಡನೇ ಪ್ರಶ್ನೆಗೆ, ದಿನಾಂಕ 2-9-95ರಂದು ತುರುವೇಕೆರೆಯಲ್ಲಿ ಒಂದು ಘಟಕವನ್ನು ಪ್ರಾರಂಭಿಸಿ ಇಲ್ಲಿನ ಗ್ರಾಮಾಂತರ ಜನರಿಗೆ ಮತ್ತಷ್ಟು ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆಯೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ನಾನು ಕೇಳುತ್ತಿರುವುದು, ಗುಬ್ಬಿ ತಾಲ್ಲೂಕಿಗೆ ಏನಾದರೂ ಸೌಕರ್ಯ ಮಾಡಿಕೊಡುತ್ತೀರಾ ಎಂದು. ಆದರೆ ಅವರು ಹೇಳುತ್ತಿರುವುದು ತುರುವೇಕೆರೆ ತಾಲ್ಲೂಕಿಗೆ ಕಲ್ಪಿಸಲಾಗಿರುವ ಸೌಕರ್ಯದ ಬಗ್ಗೆ ಹೇಳುತ್ತಿದ್ದಾರೆ. ತುರುವೇಕೆರೆ ತಾಲ್ಲೂಕಿಗೆ ಸೌಕರ್ಯ ಮಾಡಲಾಗಿದೆ. ಆದರೆ, ನಮ್ಮ ತಾಲ್ಲೂಕಿನ ಬಸ್‌ಗಳನ್ನು ಕಿತ್ತು ತುರುವೇಕೆರೆಗೆ ಹಾಕುವುದು ತಪ್ಪು. ಅದೂ ಅಲ್ಲದೆ ಗುಬ್ಬಿ- ಸಿ.ಎಸ್.ಪುರ - ಕಲ್ಲೂರು ಮಾರ್ಗವಾಗಿ ಹೋಗುತ್ತಿದ್ದ ಪೋಸ್ಟ್ ಬಸ್ ದಿನಾಂಕ:2-9-95ರಿಂದ ಹೋಗುತ್ತಿಲ್ಲ. ಮತ್ತೆ ಗುಬ್ಬಿಯಿಂದ ತುರವೇಕೆರೆಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ 4 ಬಸ್‌ಗಳು ಹೋಗುತ್ತಿದ್ದವು. ಆ ಬಸ್‌ಗಳನ್ನೂ ಪೂರ್ಣವಾಗಿ ನಿಲ್ಲಿಸಲಾಗಿದೆ. ಗುಬ್ಬಿಯಿಂದ-ಎಲ್.ಎಸ್ ಕ್ವಾರೆಗೆ ಹೋಗತಕ್ಕರಥ ಬಸ್ ನಿಲ್ಲಿಸಲಾಗಿದೆ. ಬಹಳ

ದೂರದಿಂದ ದೂರದಿಂದ ಬರತಕ್ಕಂಥ ಪ್ರಯಾಣಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಈ ಬಸ್ ನಿಲುಗಡೆಯಿಂದ ಬಹಳ ತೊಂದರೆಯಾಗಿದೆ. ಆಮೇಲೆ ತುಮಕೂರಿನಿಂದ ಗುಬ್ಬಿ-ಲಕ್ಕೇನಹಳ್ಳಿ ಮಾರ್ಗವಾಗಿ ಚೇಳೂರಿಗೆ 4 ಸಾರಿ ಹೋಗಿ ಬರುತ್ತಿದ್ದ ಬಸ್‌ಗಳನ್ನೂ ನಿಲ್ಲಿಸಿದ್ದೀರಿ. ಇದರಿಂದ ಗುಬ್ಬಿ ತಾಲ್ಲೂಕಿನ ಪ್ರಯಾಣಿಕರಿಗೆ ತೊಂದರೆಯಾಗುವುದಿಲ್ಲವೇ ಎಂದು ನಾನು ಪ್ರಶ್ನೆ ಕೇಳಿದ್ದರೆ, ತುರುವೇಕೆರೆ ತಾಲ್ಲೂಕಿಗೆ ಅನುಕೂಲ ಮಾಡಿಕೊಡಲಾಗಿದೆಯೆಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿರುವುದು ಸರಿಯಲ್ಲವೆಂದು ಭಾವಿಸುತ್ತೇನೆ. ಈಗಲಾದರೂ ಈ ತೊಂದರೆಯನ್ನು ಸರಿಪಡಿಸುವುದಕ್ಕೆ ಮಾನ್ಯ ಮಂತ್ರಿಗಳವರು ಪ್ರಯತ್ನ ಮಾಡುತ್ತಾರೆಯೇ? ಹಾಗಾದರೆ ಇನ್ನು ಎಷ್ಟು ದಿವಸಗಳಲ್ಲಿ ಈ ತೊಂದರೆಯನ್ನು ಸರಿಪಡಿಸಲಾಗುತ್ತದೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ತುಮಕೂರು ಜಿಲ್ಲೆಯು ಸಂಪೂರ್ಣವಾಗಿ ರಾಷ್ಟ್ರೀಕರಣವಾಗಿರತಕ್ಕಂಥ ಜಿಲ್ಲೆ ಅಲ್ಲ. ಕೆಲವು ರೂಟ್‌ಗಳು ಮಾತ್ರ ರಾಷ್ಟ್ರೀಕರಣವಾಗಿದೆ. ಹಾಗಾಗಿ ಎಲ್ಲಾ ರೂಟ್‌ಗಳಲ್ಲಿ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಓಡಿಸುವುದು ಕಷ್ಟವಾಗುತ್ತದೆ. ಆದರೂ ನಾವು ನಮ್ಮ ಪ್ರಯತ್ನವನ್ನು ಮಾಡುತ್ತೇವೆ. ಗುಬ್ಬಿ ತಾಲ್ಲೂಕಿಗೆ ಎಲ್ಲಾ ಹಳ್ಳಿಗಳಿಗೂ ಕೊನೆಯ ಪಕ್ಷ ಒಂದು ಟ್ರಿಪ್ ಆದರೂ ಬಸ್‌ಗಳನ್ನು ಕಳುಹಿಸತಕ್ಕಂಥ ವ್ಯವಸ್ಥೆಯಾಗಬೇಕು; ಅದನ್ನು ಮಾಡುತ್ತೇವೆ. ಆದರೆ ಸಭ್ಯದ ಪರಿಸ್ಥಿತಿಯಲ್ಲಿ ಎಲ್ಲಾ ರೂಟ್‌ಗಳಲ್ಲಿ ಓಡಿಸತಕ್ಕಂಥ ಸ್ಥಿತಿಯಲ್ಲಿ ನಮ್ಮ ಸಂಸ್ಥೆ ಇಲ್ಲ. ಮಾನ್ಯ ಸದಸ್ಯರು ಹೇಳಿರತಕ್ಕಂಥ ಒಂದೆರಡು ರೂಟ್‌ಗಳನ್ನು ಕಾರ್ಯಗತ ಮಾಡಲು ಆದಷ್ಟು ಬೇಗ ಪ್ರಯತ್ನವನ್ನು ಮಾಡುತ್ತೇನೆ ಎಂಬ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ಜಿ.ಎಸ್.ಶಿವನಂಜಪ್ಪ:- ಮಾನ್ಯ ಅಧ್ಯಕ್ಷರೇ, ಇದು ನಮಗೆ ಅವರು ಕೊಡತಕ್ಕಂಥ ಹೊಸದಾದ ರೂಟ್ ಏನೂ ಅಲ್ಲ. ಗುಬ್ಬಿ ತಾಲ್ಲೂಕು ಪೂರ್ಣವಾಗಿ ರಾಷ್ಟ್ರೀಕರಣವಾಗಿರತಕ್ಕಂಥ ತಾಲ್ಲೂಕು. ಕೊಟ್ಟಂಥ ಬಸ್‌ಗಳನ್ನು ಈಗ ಇವರು ಕಿತ್ತುಕೊಂಡಿದ್ದಾರೆಂಬ ಬಗ್ಗೆ ನನ್ನ ಮುಖ್ಯ ಪ್ರಶ್ನೆ ಇರುವುದು. 8-10 ರೂಟ್‌ಗಳಿಗಾದರೂ ಬಸ್‌ಗಳನ್ನು ಹಾಕಲು ಆಗುವುದಿಲ್ಲವೇ? ಆಗುವುದಿಲ್ಲ ಎಂದರೆ ಇರುವ ತೊಂದರೆಗಳಾದರೂ ಏನು? ಇದರಿಂದಾಗಿ ಜನರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಮಾನ್ಯ ಸಾರಿಗೆ ಸಚಿವರು ಅರಿಯಬೇಕು.

+ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಮಗೆ ತೊಂದರೆ ಏನಾಗಿದೆ ಅಂದರೆ, ಒಂದು ಬಸ್ ಏಳುವರೆ ಲಕ್ಷ ಕಿಮೀ ಓಡಿಸಿದ ಮೇಲೆ ಆ ಬಸ್‌ನ್ನು ಓಡಿಸಿದರೆ ಅದು ಎಕಾನಮಿಕ್ ಆಗುವುದಿಲ್ಲ. ಅದರಿಂದ ಅರ್ನಿಂಗ್ಸ್ ಆಗುವುದಿಲ್ಲ, ಲಾಸ್ ಉಂಟಾಗುತ್ತದೆ. ಕಾಸ್ಟ್ ಆಫ್ ಆಪರೇಷನ್ಸ್ ಕೂಡ ಬಹಳ ಜಾಸ್ತಿಯಾಗುತ್ತದೆ. ಹೀಗಾಗಿ ಏಳೂವರೆ ಲಕ್ಷ ಕಿಮೀ ಓಡಿಸಿದ ಮೇಲೆ ಆ ಬಸ್‌ನ್ನು ನಿಲ್ಲಿಸುತ್ತೇವೆ. ಏಳೂವರೆ ಲಕ್ಷ ಕಿಮೀ ಓಡಿರತಕ್ಕಂಥ ಸುಮಾರು ಎರಡೂವರೆ ಸಾವಿರ ಬಸ್‌ಗಳು ಸಾರಿಗೆ ಸಂಸ್ಥೆಯಲ್ಲಿವೆ. ಅವುಗಳನ್ನು ರಿ-ಪ್ಲೇಸ್ ಮಾಡಬೇಕಾಗುತ್ತದೆ. ಅದಕ್ಕೆ ದೊಡ್ಡ ಕ್ಯಾಪಿಟಲ್

ಇನ್‌ವೆಸ್ಟ್‌ಮೆಂಟ್ ಬೇಕಾಗುತ್ತದೆ. ಆದ್ದರಿಂದ ಅದನ್ನು ಒಂದು ದಿವಸದಲ್ಲಿ ಮಾಡಲು ಆಗುವುದಿಲ್ಲ. ಈ ತೊಂದರೆಗಳಿಂದಾಗಿ ಎಲ್ಲವನ್ನೂ ಓಡಿಸುವುದಕ್ಕಾಗುವುದಿಲ್ಲ ಎಂದು ಹೇಳಿದೆ. ನಮ್ಮ ಹಣಕಾಸಿನ ಪರಿಸ್ಥಿತಿಯೂ ಹಾಗೆಯೇ ಆಗಿದೆ. ಹೀಗಾಗಿ ಸಧ್ಯದಲ್ಲಿಯೇ ಎಲ್ಲವನ್ನೂ ಮಾಡುತ್ತೇನೆಂಬ ಭರವಸೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಆದರೆ ನನ್ನ ಪ್ರಯತ್ನವನ್ನು ನಾನು ಮಾಡುತ್ತೇನೆ. ಎಲ್ಲಿ ಸಾರಿಗೆ ಸಂಸ್ಥೆ ತನ್ನ ಬಸ್‌ಗಳನ್ನು ಓಡಿಸುವುದಕ್ಕೆ ಆಗುವುದಿಲ್ಲ ಅಲ್ಲಿ ಡೆಪ್ಯುಟಿ ಕಮೀಷನರ್‌ಗೆ ನಾನು ಸೂಚನೆ ಕೊಟ್ಟು, ಆರ್‌ಟಿಒರವರಿಗೆ ಹೇಳಿ ಖಾಸಗಿ ಬಸ್‌ಗಳನ್ನಾದರೂ ಓಡಿಸಲು ವ್ಯವಸ್ಥೆ ಮಾಡುತ್ತೇನೆ.

+ಶ್ರೀ ಡಿ.ಟಿ.ಜಯಚಂದ್ರ:- ಮಾನ್ಯ ಸಭಾಧ್ಯಕ್ಷರೇ, ಇದು ತುರುವೇಕೆರೆ ಡಿಪೋಕ್ಕೆ ಬರುವ ಕ್ಷೇತ್ರವಾಗಿದ್ದು ನನ್ನ ಕ್ಷೇತ್ರವು ಸಂಪೂರ್ಣವಾಗಿ ಆ ವ್ಯಾಪ್ತಿಯಲ್ಲಿ ಬರುತ್ತದೆ. ತುರುವೇಕೆರೆ ಡಿಪೋ ಆಗುವುದಕ್ಕಿಂತ ಮೊದಲು 86 ಬಸ್‌ಗಳು ಓಡಾಡುತ್ತಿದ್ದವು. ಅದೇ ಡಿಪೋ ಆದಮೇಲೆ ಕೇವಲ 36 ಬಸ್‌ಗಳು ಓಡಾಡುತ್ತಿವೆ. ಹಾಗಾದರೆ ಅಲ್ಲಿ ಡಿಪೋ ಮಾಡಿ ಪ್ರಯೋಜನವೇನಾಯಿತು? ಇದನ್ನು ತೆಗೆದುಕೊಂಡು ಹೋಗಿ ಹಾಸನ ಡಿವಿಜನ್‌ಗೆ ಸೇರಿಸಿದ್ದೀರಿ. ಅದರ ಪರಿಣಾಮವಾಗಿ ನಮ್ಮ ಮೊಫ್ಯುಸಲ್ ರೋಡ್‌ಗಳಲ್ಲಿ ಓಡಾಡುತ್ತಿದ್ದ ಎಲ್ಲಾ ಬಸ್‌ಗಳೂ ನಿಂತಿವೆ. ನಾವು ಕೇಳಿದರೆ ಹಾಸನ ಡಿವಿಜನ್‌ನವರನ್ನು ಕೇಳಿ ಎಂದು ಹೇಳುತ್ತಾರೆ. ನಾವು ತುರುವೇಕೆರೆ ಡಿಪೋದವರಿಗೆ ಕಾಗದ ಏನಾದರೂ ಬರೆದರೆ ಇದು ಹಾಸನ ಡಿವಿಜನ್‌ನವರಿಗೆ ಸಂಬಂಧಪಟ್ಟದ್ದುದು ಎಂದು ಬರೆಯುತ್ತಾರೆ. ಡಿಪೋ ಆಗಿದ್ದರಿಂದ ನಮಗೆ ಯಾವ ಪ್ರಯೋಜನವೂ ಆಗಿಲ್ಲ. ದಯಮಾಡಿ ಕ್ಯಾನ್ಸಲ್ ಆಗಿರತಕ್ಕಂಥ ರೂಟ್‌ಗಳನ್ನು ರೆಸ್ಟೋರ್ ಮಾಡಿ. ನೀವೇ ಹೇಳಿದ ಹಾಗೆ ಎಲ್ಲಾ ರೂಟ್‌ಗಳು ತುಮಕೂರು ಜಿಲ್ಲೆಯಲ್ಲಿ ರಾಷ್ಟ್ರೀಕರಣವಾಗಿಲ್ಲ. ಅಂಥ ರಸ್ತೆಗಳಲ್ಲಿ ಖಾಸಗಿಯವರು ಪರ್ಮಿಟ್ ತೆಗೆದುಕೊಂಡರೂ ಕೂಡ ಬಸ್‌ಗಳನ್ನು ಓಡಿಸುವುದಿಲ್ಲ, ನಿಮ್ಮ ಸಂಸ್ಥೆಯವರೂ ಓಡಿಸುವುದಿಲ್ಲ. ನಮ್ಮ ಸಮಸ್ಯೆಗಳಿಗೆ ನಾವು ಯಾವ ಕಾಗದ ಬರೆದರೂ, ಚರ್ಚೆ ಮಾಡಿದರೂ ನಿಮ್ಮಿಂದ ಒಂದೇ ಅಭಿಪ್ರಾಯ ಬರುತ್ತದೆ. ಹೀಗಾಗಿ ನಮಗೆ ಖಾಸಗಿ ಬಸ್ಸೂ ಇಲ್ಲ, ಸರಕಾರಿ ಬಸ್ಸೂ ಇಲ್ಲ ಎಂಬ ಪರಿಸ್ಥಿತಿಯಾಗಿದೆ. ನಮ್ಮ ತುರುವೇಕೆರೆ ಡಿಪೋ ವ್ಯಾಪ್ತಿಗೆ ಬರುವ ಕ್ಷೇತ್ರದ ಬಗ್ಗೆ ನಾನು ಸುಮಾರು 150 ಕಾಗದಗಳನ್ನು ನಾನು ಬರೆದಿರಬೇಕು. ಆದರೆ ಯಾವ ಪ್ರಯೋಜನವೂ ಆಗಿಲ್ಲ. ದಯಮಾಡಿ ಮಾನ್ಯ ಅಧ್ಯಕ್ಷರು ಮನಸ್ಸು ಮಾಡಿ ನಮ್ಮ ತುಮಕೂರು ಜಿಲ್ಲೆಗೆ ಒಂದು ನೋಡಬೇಕು. ತಮಗೆ ಅನುಭವ ಇದೆ. ತಾವು ರೀಪೋರ್ಟ್‌ನ್ನು ಕೂಡ ಕೊಟ್ಟವರು. ತುಮಕೂರು ಜಿಲ್ಲೆಯಲ್ಲಿ ಶಾಸಕರುಗಳ ಪರಿಸ್ಥಿತಿ ಏನಾಗಿದೆ ಮತ್ತು ಸಮಸ್ಯೆಗಳು ಏನಿವೆ ಎಂಬುದನ್ನು ನಮ್ಮಲ್ಲಿ ಬಂದು ನೋಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಚಂದ್ರರವರು ಹೇಳಿರತಕ್ಕಂಥ ಎಲ್ಲಾ ವಿಚಾರಗಳೂ ಸತ್ಯ. ಅದನ್ನು ನಾನು ಒಪ್ಪುತ್ತೇನೆ. 1986-87ರಲ್ಲಿ ಪ್ರಾರಂಭ ಮಾಡಿರತಕ್ಕಂಥ ಷೆಡ್ಯೂಲ್‌ಗಳಲ್ಲಿ 30 ಪರ್‌ಸೆಂಟ್ ಕ್ಯಾನ್ಸಲ್ ಮಾಡಿದ್ದಾರೆಯೇ ಹೊರತು ಹೊಸದಾಗಿ ಷೆಡ್ಯೂಲ್‌ಗಳನ್ನು ಪ್ರಾರಂಭ ಮಾಡಿಲ್ಲ. ಈಗ

1986-87ರಲ್ಲಿ ನಿಂತಿರತಕ್ಕಂಥಾದ್ದನ್ನೆಲ್ಲಾ ಮತ್ತೆ ರಿ-ಶೆಡ್ಯೂಲ್ ಮಾಡಿ ಎಂದರೆ ಅದು ಸಾಧ್ಯವಿಲ್ಲ. ಖಾಸಗಿಯವರಿಗೆ ಕೊಟ್ಟ ತತ್‌ಕ್ಷಣವೇ ಅವರೆಲ್ಲಾ ನಡೆಸುತ್ತಾರೆಂಬ ಭರವಸೆಯೂ ನಮಗೆ ಇಲ್ಲ. ಖಾಸಗೀಯವರು ಪರ್ಮಿಟ್ ತೆಗೆದುಕೊಂಡಿದ್ದರೂ ಕೂಡ ಬಸ್ ಓಡಿಸುವುದಿಲ್ಲವೆಂದು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಗೊಂದಲಮಯವಾದ ಪರಿಸ್ಥಿತಿ ಇದೆ ಎಂದು ನನಗೆ ಗೊತ್ತಿದೆ.

+ಅಧ್ಯಕ್ಷರು:- ನಾನೂ ಕೂಡ ತಮ್ಮಲ್ಲಿ 2-3 ಸಲ ವಿನಂತಿ ಮಾಡಿಕೊಂಡಿದ್ದೆ. ಶ್ರೀನಿವಾಸಪುರ ತಾಲ್ಲೂಕಿನವರು ನಾವು ಆಂಧ್ರದ ಗಡಿಯಲ್ಲಿದ್ದೇವೆ. ಸಂಪೂರ್ಣವಾಗಿ ನೀವು ನಮ್ಮಲ್ಲಿ ರಾಷ್ಟ್ರೀಕರಣ ಮಾಡಿದ್ದೀರಿ. ಓಲ್ಡ್ ಷೆಡ್ಯೂಲ್ಸ್‌ನ್ನು ಕ್ಯಾನ್ಸಲ್ ಮಾಡಿದ್ದೀರಿ. ಕೆಲವರು ಇಂಟರ್‌ಸ್ಟೇಟ್ ಕ್ಯಾರಿಯೇಜ್‌ನವರು ಯಾರಿದ್ದಾರೆ, ಸ್ಟೇಟ್ ಮತ್ತು ಇಂಟರ್‌ಸ್ಟೇಟ್ ಆಪರೇಟರ್ಸ್ ಇದ್ದಾರೆ ಅವರು ಪಟ್ಟಭದ್ರವಾಗಿ ಉಳಿದುಕೊಂಡಿದ್ದಾರೆ. ಬೇರೆಯವರು ಯಾರೂ ಪ್ರೈವೇಟ್‌ನವರು ಆಪರೇಟ್ ಮಾಡುವ ಹಾಗಿಲ್ಲ. ಆರ್‌ಟಿಓ ಅವರಿಗೆ ಅಲ್ಲಿ ಪರ್ಮಿಟ್ ಕೊಡುವುದಕ್ಕೆ ಜ್ಯುರಿಸ್‌ಡಿಕ್ಷನ್ ಇಲ್ಲ. ನಿಮ್ಮವರು ಷೆಡ್ಯೂಲ್ಸ್‌ನ್ನು ಕ್ಯಾನ್ಸಲ್ ಮಾಡಿದ್ದಾರೆ. ನನ್ನ ನೇಟೀವ್ ವಿಲೇಜ್‌ನಿಂದ ತಾಲ್ಲೂಕು ಕೇಂದ್ರಕ್ಕೆ ಬರುವುದಕ್ಕೆ ಕನಿಷ್ಟ ನಾಲ್ಕು ಗಂಟೆಗಳ ಕಾಲ ಬೇಕಾಗುತ್ತದೆ. ಬೆಳಿಗ್ಗೆ ಒಂದು ಬಸ್ ಬರುತ್ತದೆ. ಅದನ್ನು ಬಿಟ್ಟರೆ ತಾಲ್ಲೂಕು ಕಚೇರಿಗೆ ನಮ್ಮ ಊರಿನ ಜನರು, ರೈತರು ಹೋಗಬೇಕಾದರೆ 11 ಗಂಟೆಯವರೆಗೆ ಮತ್ತೆ ಬಸ್ ಇಲ್ಲ. ಹೀಗಾಗಿ ಎರಡು ಬಸ್‌ಗಳನ್ನು ಬದಲಾಯಿಸಿ ನಾವು ಹೋಗಬೇಕಾಗುತ್ತದೆ. ಇದರಿಂದಾಗಿ ಟಿಂಪೋ ಮತ್ತು ಲಾರಿಗಳಲ್ಲಿ ಟ್ರಾವಲ್ ಮಾಡತಕ್ಕಂಥಾದ್ದು ಪ್ರಾರಂಭವಾಗುತ್ತದೆ. ನಾನು ಹೇಳುವುದೇನೆಂದರೆ ಕನಿಷ್ಟ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ವ್ಯಾಪ್ತಿಯಲ್ಲಿ ಬರತಕ್ಕಂಥದ್ದು ಏನಿದೆ ಅದನ್ನು ಲಿಬರಲೈಸ್ ಮಾಡಿಬಿಡಿ. ಯಾರಾದರೂ ಆಪರೇಟ್ ಮಾಡಿಕೊಂಡಿರಲಿ. ನಿಮಗೆ ಟ್ಯಾಕ್ಸ್ ಬರುತ್ತದೆ, ನಿಮ್ಮ ಹೊರೆಯೂ ಕಡಿಮೆಯಾಗುತ್ತದೆ. ನಿಮ್ಮ ಸಂಸ್ಥೆಯ ಬಸ್‌ಗಳನ್ನು ಮೇನ್ ರೋಡ್‌ಗಳಲ್ಲಿ ಎಲ್ಲಾ ಕಡೆಗಳಲ್ಲಿ ಓಡಿಸಿ ಸಂಪಾದನೆ ಮಾಡಿಕೊಳ್ಳಿ ನಮ್ಮ ಅಭ್ಯಂತರವೇನಿಲ್ಲ. ಕೆಎಸ್‌ಆರ್‌ಟಿಸಿ ಉಳಿಯಬೇಕು, ಅಲ್ಲಿಯ ನೌಕರರಿಗೆಲ್ಲರಿಗೂ ಸೇಫ್ಟಿ ಇರಬೇಕು. ನಾವು ಕೆಎಸ್‌ಆರ್‌ಟಿಸಿ ತೆಗೆದುಬಿಡಿ ಎಂದು ಹೇಳುವುದಿಲ್ಲ. ಮೊಫ್ಯುಸಲ್ ರೂಟ್‌ಗೆ ಹಾಕಿದರೆ ನಿಮಗೆ ಬರುವುದಕ್ಕೆ ಇಷ್ಟ ಇರುವುದಿಲ್ಲ; ಪ್ರೈವೇಟ್‌ನವರು ಬರುವ ಹಾಗಿಲ್ಲ. ಹೀಗಾದರೆ ನಮ್ಮ ಗತಿ ಏನೆಂದು ಹೇಳಿ?

+ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ನಾನು ಕೆಎಸ್‌ಆರ್‌ಟಿಸಿಯವರು ಮಾಡುತ್ತಿರತಕ್ಕಂಥಾದ್ದೆಲ್ಲವೂ ಸರಿ ಎಲ್ಲವೂ ಕೂಡ ರಾಷ್ಟ್ರೀಕರಣವಾಗಿ, ಬಿಡಬೇಕು ಅಥವಾ ನಾವು ಡಿ-ನ್ಯಾಷನಲೈಸ್ ಮಾಡಬಹುದು ಎಂಬ ದೃಷ್ಟಿಯನ್ನು ಇಟ್ಟುಕೊಂಡಿಲ್ಲ. ಪ್ರಯಾಣಿಕರ ಹಿತದೃಷ್ಟಿಯಿಂದ ನಮ್ಮ ಸರಕಾರದವರು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆ ಬಗ್ಗೆ ನಾನು ಭರವಸೆ ಕೊಡುತ್ತೇನೆ. ತಾವು ಹೇಳಿರತಕ್ಕಂಥಾದ್ದು ನಿಜ. ಪರಿಸ್ಥಿತಿ ಬಹಳ ಗೊಂದಲದಲ್ಲಿದೆ. ಎಲ್ಲವೂ ಸಹಿತ ಸರಿಯಾಗಿಲ್ಲ. ಸುಧಾರಣೆಯಾಗಬೇಕು. ಅದಕ್ಕೋಸ್ಕರವಾಗಿ ನಾನು ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿಯೂ ನಮ್ಮ

ಶಾಸಕರಿಗೆ ಸ್ವಲ್ಪ ತೊಂದರೆಯಾದರೂ ಪರವಾಗಿಲ್ಲವೆಂದು ಹೇಳಿ, ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಪ್ರತಿದಿನ ರಾತ್ರಿ 8-00 ಗಂಟೆ ಇಂದ 11 ಗಂಟೆಯವರೆಗೂ ಕುಳಿತು ನಾವಿದನ್ನು ಚರ್ಚೆ ಮಾಡುತ್ತಿರುತ್ತೇವೆ. ನನಗೆ ಒಂದು ಸಂತೋಷ ಅಂದರೆ ಎಲ್ಲಾ ವಿರೋಧಿ ಮತ್ತು ಆಡಳಿತ ಪಕ್ಷದವರು ಬಂದು ಹಾಜರಾಗಿ ದೊಡ್ಡ ದೊಡ್ಡ ಹೊರೆಗಳನ್ನೇ ಇಡುತ್ತಿದ್ದಾರೆ. ಕೆಲವು ಶಾಸಕರು 60-80 ಪತ್ರಗಳನ್ನು ಬರೆದಿದ್ದಾರೆ. ಆದರೆ ಏನೂ ಕೆಲಸವಾಗಿಲ್ಲ. ಇದನ್ನು ನಾನು ಒಪ್ಪುತ್ತೇನೆ. ಸ್ವಲ್ಪ ಸಮಯ ಕೊಡಿ. ಇಲ್ಲಿ ನಾನು ಅಧಿವೇಶನ ನಡೆಯತಕ್ಕಂಥ ಸಂದರ್ಭದಲ್ಲಿ ಜಿಲ್ಲಾವಾರು ಖಾಸಗಿ ಬಸ್‌ಗಳನ್ನು ಎಲ್ಲಿ ಹಾಕುವುದು, ಸಂಸ್ಥೆಯ ಬಸ್‌ಗಳನ್ನು ಎಲ್ಲಿ ಹಾಕುವುದು ಎಂಬ ಬಗ್ಗೆಯೂ ಚರ್ಚೆ ಮಾಡುತ್ತೇನೆ. ಅದಾದ ನಂತರ ಎರಡು ತಿಂಗಳುಗಳ ಒಳಗಡೆ 20 ಜಿಲ್ಲೆಗಳಿಗೂ ಕೂಡ ನಾನು ಖುದ್ದಾಗಿ ಹೋಗುತ್ತಾ ಇದ್ದೇನೆ. ಅಧಿವೇಶನ ಇರುವಾಗಲೂ ಶನಿವಾರ, ಭಾನುವಾರ ಬೇರೆ ಬೇರೆ ಜಿಲ್ಲೆಗಳಿಗೆ ಹೋಗಿ ಆಯಾಯ ಶಾಸಕರುಗಳ ಜೊತೆಗೆ, ಪ್ರಯಾಣಿಕರ ಸಂಘದವರ ಜೊತೆಯಲ್ಲಿ; ಅಧಿಕಾರಿಗಳ ಜೊತೆಯಲ್ಲಿ, ಜಿಲ್ಲಾಧಿಕಾರಿಗಳನ್ನು ಕರೆಸಿ, ಸಾರಿಗೆ ಸಂಸ್ಥೆಯ ಅಧಿಕಾರಿಗಳನ್ನು ಕರೆಸಿ, ಆರ್‌ಟಿಓರವರನ್ನು ಕರೆಸಿ ಚರ್ಚೆ ಮಾಡಿ ವ್ಯವಸ್ಥೆಯನ್ನು ಉತ್ತಮಪಡಿಸುವಲ್ಲಿ ನನ್ನ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ಟಿ.ಹೆಚ್.ಬಸವರಾಜ್:- ಬೆಂಗಳೂರಿನಿಂದ ಹೊಸದುರ್ಗಕ್ಕೆ ಸಾಯಂಕಾಲ 6-15ಕ್ಕೆ ಎಕ್ಸ್‌ಪ್ರೆಸ್‌ಬಸ್ ಬಿಡುತ್ತಾರೆ. ಕಿಬ್ಬಳ್ಳಿ ದಾಟಿದ ಮೇಲೆ ಚಿಕ್ಕನಾಯಕನಹಳ್ಳಿ ಮಧ್ಯೆ ಗೋಡೆಕೆರೆ ಎಂಬ ನಾಲ್ಕು ಕಿ.ಮೀ.ದೂರ ಇರುವ ಹಳ್ಳಿಗೆ ಹೋಗಿ ಮತ್ತೆ ವಾಪಸ್ ಬರಬೇಕಾಗುತ್ತದೆ. ಇದರಿಂದಾಗಿ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತದೆ. ಚಿಕ್ಕನಾಯಕನಹಳ್ಳಿಯಲ್ಲಿ ಹಾಲ್ಟ್ ಆಗುವಂಥ ಅನೇಕ ಬಸ್‌ಗಳು ಇವೆ. ಅವುಗಳನ್ನು ಆ ಊರಿಗೆ ಹೋಗುವ ಹಾಗೆ ಮಾಡಬಹುದು. ಇದರಿಂದ ಹೊಸದುರ್ಗಕ್ಕೆ ಹೋಗುವವರಿಗೆ ಬಹಳ ಅನುಕೂಲವಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಅವರು ಪತ್ರ ಬರೆದು ವಿವರ ನೀಡಲಿ. ನಾನು ಪರಿಶೀಲಿಸುತ್ತೇನೆ.

ಶ್ರೀ ಬಿ.ನಂಜಾಮರಿ:- ತುರುವೇಕೆರೆ ಡಿಪೋ ಆಗುವುದಕ್ಕಿಂತ ಮುಂಚೆ ಅರಸೀಕೆರೆ ಮತ್ತು ಚೆನ್ನರಾಯಪಟ್ಟಣ ಡಿಪೋದಿಂದ ತಿಪಟೂರು ಕ್ಷೇತ್ರಕ್ಕೆ ಅಲ್ಲಿನ ಗ್ರಾಮಾಂತರಕ್ಕೆ ಸಾಕಷ್ಟು ಬಸ್‌ಗಳನ್ನು ಬಿಡುತ್ತಿದ್ದರು. ತುರುವೇಕೆರೆ ಡಿಪೋ ಆದಮೇಲೆ ನಮಗೆ ಬಸ್‌ಗಳು ಕಡಿಮೆಯಾಗಿವೆ. ಅರಸೀಕೆರೆ ಡಿಪೋ ಕೇಳಿದರೆ ತುರುವೇಕೆರೆಯವರನ್ನು ಕೇಳಿ ಎಂದು ಹೇಳುತ್ತಾರೆ. ತುರುವೇಕೆರೆ ಡಿಪೋದವರನ್ನು ಕೇಳಿದರೆ ನಮ್ಮಲ್ಲಿ ಬಸ್‌ಗಳು ಇಲ್ಲ, ನಮಗೆ ಓಡಿಸಲು ಸಾಧ್ಯವಾಗುತ್ತಾ ಇಲ್ಲ, ಹೀಗಾಗಿ ಗ್ರಾಮಾಂತರದ ಪ್ರಯಾಣಿಕರು ನಮ್ಮನ್ನು ಬಹಳ ಒತ್ತಾಯ ಮಾಡುತ್ತಾ ಇದ್ದಾರೆ. ನಮ್ಮ ತಿಪಟೂರಿಗೆ ರಾಜ್ಯದ ಎಲ್ಲಾ ಭಾಗಗಳಿಂದ ಜನರು ಬರುತ್ತಾರೆ. ವಿಶೇಷತಃ 4-5 ಜಿಲ್ಲೆಗಳಿಂದ ಜನರು ಹೆಚ್ಚು

ಬರುತ್ತಿರುತ್ತಾರೆ.

11- 10 ಎ.ಎಂ

ಆದರೂ ಸುಮಾರು ಮೂರ್ನಾಲ್ಕು ಆಕ್ಸಿಡೆಂಟಾಗಿ ಐದಾರು ಜನ ಒಂದೊಂದು ವ್ಯಾನಿನಲ್ಲಿ ಸತ್ತುಹೋಗಿದ್ದಾರೆ. ಆ ಭಾಗದಲ್ಲಿ ಮ್ಯಾಕ್ಸಿಕ್ಯಾಬ್‌ಗಳು ಸಿಕ್ಕಾಪಟ್ಟೆ ಸ್ಪೀಡ್ ಹೊಡೆಯುತ್ತಾರೆ. ಅದರಿಂದ ಆಕ್ಸಿಡೆಂಟ್ ಜಾಸ್ತಿ ಆಗುತ್ತಿವೆ. ಬಸ್‌ಗಳು ಓಡುತ್ತಿಲ್ಲ. ಮತ್ತೆ ಒಂದು ತಿಂಗಳ ಹಿಂದೆ ತಿಪಟೂರು ತುಮಕೂರು ಮಧ್ಯೆ ಮ್ಯಾಕ್ಸಿಕ್ಯಾಬ್‌ಗಳು, ಒಂದು ಲೆಕರ್‌ವ್ಯಾನೂ ಸೇರಿ ಆಕ್ಸಿಡೆಂಟಾಯಿತು. 18 ಜನ ಒಂದೇ ಸಲ ಸತ್ತು ಹೋದರು. ಇಂಥಾ ಜಾಗಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ಒಂದೂ ಓಡುತ್ತಿಲ್ಲ. ಪ್ರೈವೇಟ್‌ವ್ಯಾನ್‌ಗಳು ಓಡಾಡುತ್ತಿವೆ. ಅದಕ್ಕಾಗಿ ತುರ್ತಾಗಿ ನೀವು ಬಿಡಬೇಕು. ಚಿಕ್ಕನಾಯ್ಕನಹಳ್ಳಿಯಿಂದ ಬರುವ ರಸ್ತೆಯಲ್ಲಿ, ತುರುವೇಕೆರೆ ತಿಪಟೂರುಗಳಲ್ಲಿ ಬಸ್‌ಗಳಿಲ್ಲ. ಆದ್ದರಿಂದ ಸಚಿವರಿಗೆ ಹೇಳಿ ನಮ್ಮ ರೂಟ್‌ನಲ್ಲಿ ಬಸ್‌ಗಳನ್ನು ಹಾಕಿಕೊಡಬೇಕೆಂದು ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಪರಿಶೀಲನೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ತಾಲೂಕುಗಳು ಅರ್ಧ ರಾಷ್ಟ್ರೀಕರಣ ಅರ್ಧ ಖಾಸಗೀಕರಣ ಆದವುಗಳು. ಈಗ ನಾನು ಏನು ಕೇಳುತ್ತೇನೆ ಎಂದರೆ ಎಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ರೂಟಿನಲ್ಲಿ ಓಡಿಸುವುದಕ್ಕಾಗುವುದಿಲ್ಲವೋ ಕೆಲವು ಕಡೆ ಪ್ರಾರಂಭದಲ್ಲಿ ಖಾಸಗೀಕರಣ ಭಾಗ ಇರುತ್ತವೆ, ಅಥವಾ ರಾಷ್ಟ್ರೀಕರಣ ಭಾಗ ಇರುತ್ತವೆ. ಕೊನೆಯಲ್ಲಿ ರಾಷ್ಟ್ರೀಕರಣ ಭಾಗ ಇರುತ್ತವೆ ಅಥವಾ ಖಾಸಗೀಕರಣ ಭಾಗ ಇರುತ್ತವೆ. ಮಧ್ಯದಲ್ಲಿ ರಾಷ್ಟ್ರೀಕರಣ ರಸ್ತೆ ಇರುತ್ತವೆ. ಅಂಥಾ ಭಾಗದಲ್ಲಾಗಬಹುದು ಅಥವಾ ಯಾವುದೇ ಭಾಗದಲ್ಲಿ ನಿಮ್ಮ ಸರ್ಕಾರಿ ಬಸ್ ಓಡಿಸುವುದಕ್ಕಾಗುವುದಿಲ್ಲ ಅಂಥ ಕಡೆಗಳಲ್ಲಿ ಖಾಸಗಿಯವರು ಓಡಿಸುತ್ತೇನೆಂದು ಬಂದರೆ ತಾವು ಏಕೆ ಅವಕಾಶ ಕೊಡಬಾರದು?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಅಧ್ಯಕ್ಷರು ಯಾವ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿದರೋ ಅದೇ ವಿಚಾರವನ್ನು ಶ್ರೀ ಕಾಗೋಡು ತಿಮ್ಮಪ್ಪನವರೂ ಹೇಳಿದ್ದಾರೆ. ಈ ರೀತಿ ಅನೇಕ ಪಾಕೆಟ್‌ಗಳಿವೆ. ಸಾರಿಗೆ ಇಲಾಖೆ ಕಾರ್ಯದರ್ಶಿಗಳ ಜೊತೆ ನಾನು ಕುಳಿತು ಪ್ರಯಾಣಿಕರ ಹಿತದೃಷ್ಟಿಯಿಂದ ಕ್ರಮ ತೆಗೆದುಕೊಳ್ಳುವ ಭರವಸೆ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸಚಿವರಿಗೆ ಹಿಂದಿನಿಂದಲೂ ಅನುಭವ ಇದೆ. ಈಗ ಆ ಇಲಾಖೆ ವಹಿಸಿಕೊಂಡ ತಕ್ಷಣ ಎಲ್ಲಾ ಶಾಸಕರೂ ಬರಬೇಕೆಂದು ಹೇಳಿದ್ದೀರಿ, ನಮ್ಮ ಶಾಸಕರಿಗೂ ಹೋಗಿ ನಿಮ್ಮ ಸಮಸ್ಯೆ ಹೇಳಿಕೊಳ್ಳಿ. ಅವರಿಗೆ ಕಳಕಳಿ ಇದೆ ಏನೋ ಮಾಡುತ್ತಾರೆ ಎಂದು ನಾವೂ ಹೇಳಿದ್ದೇವೆ. ತಾವು ಉತ್ತರ ಕೊಡುತ್ತಿರುವ ಧಾಟಿ ನೋಡಿದರೆ ಅವರು ಆಗಲೇ ಅರ್ಜಿಗಳನ್ನು ಕೊಟ್ಟಿರುವುದನ್ನು ಓದಿದರೆ ಗೊತ್ತಾಗುತ್ತದೆ.

ನಿಮ್ಮಲ್ಲಿ ಬಂದು ಶಾಸಕರು ವಿನಂತಿ ಮಾಡಿದ ಮೇಲೆ ಅವರು ಆಸೆ ಇಟ್ಟುಕೊಂಡಿದ್ದಾರೆ, ಈ ಶಾಸಕರ ದರ್ಶನ ಇದು ಹಿಂದಿನ ಜನತಾದರ್ಶನದಂತೆ ಆಗಬಾರದು ಎಂದು. ನಿಜವಾಗಿಯೂ ಜನರ ಬೇಡಿಕೆ ಈಡೇರಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡುತ್ತೀರೊ?

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಅವರು ಜನತಾದರ್ಶನ ಆಗಬಾರದೆಂದು ಹೇಳಿರುವುದನ್ನು ನಾನು ಒಪ್ಪುವುದಿಲ್ಲ. ಜನತಾದರ್ಶದಿಂದ ರಾಜ್ಯಕ್ಕೆ ರಾಷ್ಟ್ರಕ್ಕೆ ಅನೇಕ ಹೊಸ ಕಾರ್ಯಕ್ರಮಗಳು ಬಡವರ ಪರವಿರುವ ಕಾರ್ಯಕ್ರಮಗಳು ಹೊರಹೊಮ್ಮಿವೆ; ಅವನ್ನು ಇಡೀ ದೇಶಕ್ಕೆ ತೆಗೆದುಕೊಂಡು ಹೋಗಿರುವ ಕೀರ್ತಿ ನಮ್ಮ ನಾಯಕರಿಗೆ ಸೇರಿದ್ದು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಿ, ಶಾಸಕರ ಸಭೆಗಳನ್ನು ಕರೆದಿರುವುದು ಅವರ ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದಾಗಿ ಎಂದು ಹೇಳಿದ್ದಾರೆ. ನಾನು ಈಗಾಗಲೇ ಮುಖ್ಯಮಂತ್ರಿಗಳ ಜೊತೆ ಮಾತಾಡಿದ್ದೇನೆ. ಡಿಪೋ ಲೆವೆಲ್ಸ್‌ನಲ್ಲಿ ಅಡ್ಜೆಸರಿಬಾಡಿಗಳನ್ನು ಎಂಎಲ್‌ಎಗಳ ಅಧ್ಯಕ್ಷತೆಯಲ್ಲಿಯೇ ಮಾಡಬೇಕೆಂದು ಸರ್ಕಾರ ಪರಿಶೀಲಿಸುತ್ತಿದೆ. 105 ಡಿಪೊಗಳಿವೆ, ಅಲ್ಲೆಲ್ಲಾ ಅಡ್ಜೆಸರಿ ಕೌನ್ಸಿಲ್ ಮಾಡಿ ಟ್ರಾಫಿಕ್ ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಅವರಿಗೆ ಅಧಿಕಾರವನ್ನೂ ಕೊಡಬೇಕೆಂದು ಯೋಚಿಸುತ್ತಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲೂ ಬಸ್‌ಗಳದು ಬಹಳ ತೊಂದರೆ ಇದೆ. ನಾನು ಈ ಬಗ್ಗೆ ಪ್ರಶ್ನೆ ಹಾಕಿದರೆ ಅನ್‌ಸ್ಟಾರ್ಡ್‌ನಲ್ಲೇ ಬರುತ್ತವೆ ನಮ್ಮ ಪುಣ್ಯ ಸ್ಟಾರ್‌ನಲ್ಲಿ ಬರುತ್ತಿಲ್ಲ. ಮಾನ್ಯ ಸಚಿವರನ್ನು ನಾಲ್ಕೈದು ಸಾರಿ ಭೇಟಿ ಮಾಡಿ ಕೇಳಿಕೊಂಡಿದ್ದೇನೆ; ನನ್ನ ಕಡೆ ಅವರಿನ್ನೂ ಗಮನಹರಿಸಿಲ್ಲ, ಆದಷ್ಟು ಬೇಗ ನನ್ನ ಕಡೆ ಗಮನಹರಿಸಿ ನನ್ನ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಸದಸ್ಯರು ಹೇಳಿದ ಮೇಲೆ ನಾನು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಅಧಿವೇಶನ ಸಂದರ್ಭದಲ್ಲಿ ನನ್ನ ಜೊತೆಗೆ ಬಂಧು ಚರ್ಚೆ ಮಾಡಬೇಕೆಂದು ಅವರಿಗೆ ಆದೇಶ ಕೊಟ್ಟಿದ್ದೇನೆ. ಎಲ್ಲಾ ಅಧಿಕಾರಿಗಳು ಮತ್ತು ಬಾಲಕೃಷ್ಣ ಜೊತೆ ಕುಳಿತು ಚರ್ಚೆ ಮಾಡಿ ಸಮಸ್ಯೆ ಬಗೆಹರಿಸಲು ಪ್ರಯತ್ನಮಾಡುತ್ತೇನೆ.

MR.SPEAKER:- Mr.Suresh Kumar's Question is transferred to Urban Development Department. He will have to answer.

ಶ್ರೀ ಎಸ್.ಸುರೇಶ್‌ಕುಮಾರ್:- ಕಳೆದ ಸಲ ಸಾರಿಗೆ ಸಚಿವರೇ ಇದಕ್ಕೆ ಉತ್ತರ ಕೊಟ್ಟಿದ್ದರಿಂದ ನಾನು ಪ್ರಶ್ನೆ ಕೇಳಿದೆ, ಸಚಿವರ ಬದಲಾವಣೆಯಾದ ತಕ್ಷಣ ಕ್ವೆಶ್ಚನ್ ಬದಲಾವಣೆ ಆಗುವುದಿಲ್ಲ.

ಅಧ್ಯಕ್ಷರು:- ಪೈವೇಟ್ ಬಸ್‌ಗೆ ಮಿನರ್ವಮಿಲ್ಸ್ ಗ್ರೌಂಡ್ಸ್‌ನಲ್ಲಿ ಕೇಳಿರುವುದು ನಗರಾಭಿವೃದ್ಧಿ ಸಚಿವರಿಗೆ ಬರುತ್ತದೆ. He will have to answer. I will get it answered from Urban Development Department.

ವಿಷಯ:- ರಾಜ್ಯರಸ್ತೆ ಸಾರಿಗೆ ಬಗ್ಗೆ ಶ್ರೀ ಪಿ.ಜಿ.ಆರ್.ಸಿಂಧ್ಯರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸದನ ಸಮಿತಿ ವರದಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 85 (601)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ಕಾರ್ಯದಕ್ಷತೆಯ ಬಗ್ಗೆ ಪಿ.ಜಿ.ಆರ್.ಸಿಂಧ್ಯಾರವರ ಅಧ್ಯಕ್ಷತೆಯ ಸದನ ಸಮಿತಿ ವರದಿ ಸರ್ಕಾರದವರ ಕೈ ಸೇರಿದೆಯೇ?

ಆ) ಹಾಗಿದ್ದಲ್ಲಿ, ಸಂಸ್ಥೆಗೆ ಆದಾಯ ಬರುವಂತಹ ಯಾವ ಯಾವ ಶಿಫಾರಸ್‌ಗಳನ್ನು ಜಾರಿಗೊಳಿಸಲಾಗಿದೆ, ಜಾರಿಗೊಳಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ವರದಿಯಲ್ಲಿ ಸಂಸ್ಥೆಯ ಆಡಳಿತದಲ್ಲಿ ಕಾರ್ಮಿಕರಿಗೆ ಸ್ಥಾನಮಾನ ಕಲ್ಪಿಸಿಕೊಡಬೇಕೆಂಬ ಶಿಫಾರಸ್‌ನ್ನು ಸರ್ಕಾರವು ಅನುಷ್ಠಾನಕ್ಕೆ ತಂದಿದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು.

ಆ) ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿಶೀಲಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಈಗಿನ ಪಿಜಿಆರ್ ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ ಸಾರಿಗೆ ವ್ಯವಸ್ಥೆ ರಾಜ್ಯದಲ್ಲಿ ಅನುಕೂಲವಾಗಬೇಕೆಂದು ಹಿಂದೆ ಒಂದು ಸಮಿತಿ ರಚನೆಯಾಗಿತ್ತು. ಆ ಸಮಿತಿ ವರದಿ ಸರ್ಕಾರಕ್ಕೆ ತಲುಪಿದೆ ಎಂದು ಅವರು ಹೇಳಿದ್ದಾರೆ. ಈ ವರದಿಯ ಎಷ್ಟು ಶಿಫಾರಸ್‌ಗಳನ್ನು ಸರ್ಕಾರ ಒಪ್ಪಿದೆ? ಏಕೆಂದರೆ ಆ ಸಮಿತಿಗೆ ತಾವೇ, ಅಧ್ಯಕ್ಷರು, ನಾನೂ ಒಬ್ಬ ಸದಸ್ಯನಾಗಿದ್ದೆ, ಪಿಜಿಆರ್ ಸಿಂಧ್ಯಾರವರು ಸಾರಿಗೆ ಬಗ್ಗೆ ಹೆಚ್ಚು ಅಭ್ಯಾಸ ಮಾಡಿ ಕರ್ನಾಟಕವಲ್ಲದೆ ದೇಶಾದ್ಯಂತ ಸುತ್ತಿ ಸಾರಿಗೆ ಸಂಸ್ಥೆಗಳ ವ್ಯವಸ್ಥೆ ಸರಿಪಡಿಸುವ ಬಗ್ಗೆ ಒಂದು ವರದಿ ಕೊಟ್ಟಿದ್ದಾರೆ. ನನಗನ್ನಿಸುತ್ತದೆ ಅವರು ಈ ಕಡೆ ಏನಾದರೂ ಇದ್ದಿದ್ದರೆ ವರದಿಯನ್ನು ಅಕ್ಷರಶಃ ಒಪ್ಪಬೇಕು ಎಂದು ದಿನ ಗದ್ದಲ ಮಾಡುತ್ತಿದ್ದರು. ಸುದೈವ ಆ ಇಲಾಖೆಗೆ ಅವರೇ ಈಗ ಸಚಿವರಾಗಿದ್ದಾರೆ. ಆ ವರದಿಯಲ್ಲಿ ಎಷ್ಟು ಶಿಫಾರಸ್‌ಗಳನ್ನು ತಾವು ಒಪ್ಪಿಕೊಳ್ಳುತ್ತೀರಿ? ಅದರಲ್ಲೂ